೧೯೮೪ನೇ ಇಸವಿಯ ಸೆಪ್ಟೆಂಬರ್ ೨ನೇ ದಿನಾಂಕದಂದು ಆಂಧ್ರಪ್ರದೇಶ, ಕೇರಳ, ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು, ಗುಜರಾತ್, ಪಾಂಡಿಚೇರಿ, ಗೋವಾ, ಡಯ್ಯು ಡಾಮನ್ ಹಾಗೂ ದಾದ್ರಾ ಮತ್ತು ನಗರ್‌ಹವೇಲಿ ರಾಜ್ಯಗಳ ನಡುವೆ ಆಗಿದ್ದ ಒಪ್ಪಂದದ ೭ನೇ ಖಂಡದ ೨ನೇ ಉಪ ಖಂಡವನ್ನು ತಿದ್ದುಪಡಿ ಮಾಡಿರುವ ಬಗ್ಗೆ ದಿನಾಂಕ ೧೫ನೇ ಜೂನ್ ೧೯೮೮ ರಂದು ಹೊರಡಿಸಲಾದ ಎಫ್‌ಟಿಡಿ ೨೭೬ ಡಿಎಂಎ ೮೬ನೇ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

೧೨-೩೦ ಪಿ. ಎಂ.

ವರದಿಯನ್ನೊಪ್ಪಿಸುವುದು

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಅಧ್ಯಕ್ಷರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ).—ನನ್ನ ಹೆಸರಿನ ಮುಂದಿರತಕ್ಕಂತಹ ಈ ಕೆಳಗಿನ ೪ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

೮) ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ೮೪-೮೫ನೇ ಸಾಲಿನ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕ ಪತ್ರಗಳ ಮೇಲಿನ ಹಾಗೂ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಹಾಗೂ ಮಹಾ ಲೇಖಾ ಪರೀಕ್ಷಕರ ಸಿವಿಲ್ ವರದಿಗಳ ಬಗ್ಗೆ ಸಮಿತಿಯ ೩೯ನೇ ವರದಿ;

೪) ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಸಮಿತಿಯ ಮೂರನೆಯ ಹಾಗೂ ಐದನೆಯ ವರದಿಗಳಲ್ಲಿ ಮಾಡಿದ್ದ (ಆರನೆ ವಿಧಾನ ಸಭೆ) ಶಿಫಾರಸ್ಸುಗಳಮೇಲೆ ಸರಕಾರದವರು ತೆಗೆದುಕೊಂಡಿರುವ ಕ್ರಮದ ಬಗ್ಗೆ ೪೦ನೇ ವರದಿ;

೫) ಸರಕಾರಿ ಇಲಾಖೆಗಳಲ್ಲಿ ಗಣಕೀಕರಣದ ಬಗ್ಗೆ ೪೧ನೇ ವರದಿ;

೬) ಪಶುಸಂಗೋಪನೆ, ಮೀನುಗಾರಿಕೆ ಅರಣ್ಯ ಇಲಾಖೆಗೆ ಸಂಬಂಧಿಸಿದಂತೆ ೮೪-೮೫ನೇ ಸಾಲಿನ ಹಣ ವಿನಿಯೋಗ ಮತ್ತು ವಿತ್ತೀಯ ಲೆಕ್ಕಪತ್ರಗಳ ಮೇಲಿನ ಹಾಗೂ ಸದರಿ ಸಾಲುಗಳ ಬಗ್ಗೆ ಭಾರತದ ನಿಯಂತ್ರಕ ಹಾಗೂ ಮಹಾ ಲೇಖಾ ಪರೀಕ್ಷಕರ (ಸಿವಿಲ್ ಹಾಗೂ ಕಂದಾಯ) ವರದಿಗಳ ಬಗ್ಗೆ ೪೨ನೇ ವರದಿ.

ಅಧ್ಯಕ್ಷರು.—ವರದಿಗಳನ್ನು ಒಪ್ಪಿಸಲಾಯಿತು.

ಪ್ರಕಟಣೆ-೧

ಅಧ್ಯಕ್ಷರು.—ದಿನಾಂಕ ೧-೧೦-೮೮ ರಂದು ಮಾನ್ಯ ಮುಖ್ಯಮಂತ್ರಿಗಳು ನನಗೆ ಪತ್ರವೊಂದನ್ನು ಬರೆದು ಅವರಿಗೆ ಸಧ್ಯಕ್ಕೆ ಹೆಚ್ಚಿನ ಇಲಾಖೆಗಳ ಹೊಣೆಗಾರಿಕೆ ಇರುವುದರ ಪ್ರಯುಕ್ತ ಅಧಿವೇಶನದ ಎರಡೂ ಸದನಗಳಲ್ಲಿ ಆಯಾ ಇಲಾಖೆಗಳಿಗೆ ಸಂಬಂಧಿಸಿದ ಕಾರ್ಯಕಲಾಪಗಳನ್ನು ಏಕಕಾಲಕ್ಕೆ ನೋಡಿಕೊಳ್ಳುವುದು ಕಷ್ಟಕರವಾದ್ದರಿಂದ ಕೆಲವು ಇಲಾಖೆಗಳಿಗೆ ಸಂಬಂಧಿಸಿದಂತೆ ವಿಧಾನ ಸಭೆಯ ಪ್ರಶ್ನೋತ್ತರ ಕಾರ್ಯಕಲಾಪಗಳು ಹಾಗೂ ಇತರೇ ಕಾರ್ಯಕಲಾಪಗಳನ್ನು ಅವರ ಸಹೋದ್ಯೋಗಿ ಸಚಿವರುಗಳು ನೋಡಿಕೊಳ್ಳುವರೆಂದು ಪತ್ರದಲ್ಲಿ ತಿಳಿಸಿದ್ದಾರೆ,

ಆವರು ಸೂಚಿಸಿರುವ ವ್ಯವಸ್ಥೆಯು ಕೆಳಕಂಡಂತಿವೆ.

ಸಚಿವರ ಹೆಸರು	ಇಲಾಖೆ
೧. ಶ್ರೀ ಬಿ. ರಾಚಯ್ಯ	ತೋಟಗಾರಿಕೆ
೨. ಶ್ರೀ ಎಂ. ಪಿ. ಪ್ರಕಾಶ್	ಸಹಕಾರ
೩. ಶ್ರೀ ಪಿ. ಜಿ. ಆರ್. ಸಿಂಧ್ಯ	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
೪. ಶ್ರೀ ಹೆಚ್. ಡಿ. ದೇವೇಗೌಡ	ಬಂದರು ಮತ್ತು ಒಳನಾಡು ಸಾರಿಗೆ
೫. ಪ್ರೊ॥ ಎ. ಲಕ್ಷ್ಮಿ ಸಾಗರ್	ಕಂದಾಯ ಇಲಾಖೆ (ಪಕ್ಕ ಹೊರತುಪಡಿಸಿ)
೬. ಶ್ರೀ ಜೆ. ಹೆಚ್. ಪಟೇಲ್	ಕಾರ್ಮಿಕ
೭. ಶ್ರೀ ಕೃಷ್ಣ	ಮೀನುಗಾರಿಕೆ

ಪ್ರಕಟಣೆ- ೨

ಇನ್ನು ಗ್ರಾಮೀಣಾಭಿವೃದ್ಧಿ, ಪಂಚಾಯಿತ್ ರಾಜ್ ಮತ್ತು ವಕ್ಫ್ ಮಂತ್ರಿಯವರು ಅನಾರೋಗ್ಯದ ನಿಮಿತ್ತ ತಮ್ಮ ಗೈರು ಹಾಜರಿಯಲ್ಲಿ ಸದನದಲ್ಲಿ ತಮ್ಮ ಇಲಾಖೆಗೆ ಸಂಬಂಧಪಟ್ಟ ವಿಷಯುಗಳನ್ನು ನೋಡಿಕೊಳ್ಳಲು ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಯವರಾದ ಶ್ರೀ ಎಂ. ಪಿ. ಪ್ರಕಾಶ್ ಅವರನ್ನು ವಿನಂತಿಸಿದ್ದಾರೆಂದು ನನಗೆ ದಿನಾಂಕ ೨-೧೦-೮೮ರಂದು ಪತ್ರ ಬರೆದಿರುತ್ತಾರೆ. ಈ ವಿಷಯವನ್ನು ಸಭೆಯ ಗಮನಕ್ಕೆ ತರ ಬಯಸುತ್ತೇನೆ. ಈಗ ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಪೋರ್ಟ್‌ಫೋಲಿಯೋ ಹಂಚಿದ್ದೀರಾ ಇಲ್ಲವೇ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಮಾತ್ರ ಹಂಚಿದ್ದೀರಾ.

ಅಧ್ಯಕ್ಷರು.—ಉತ್ತರ ಕೊಡುವುದಕ್ಕೆ ಆಷ್ಟೆ. ಇವತ್ತು ೩ ಅಡ್ಜರ್ನ್‌ಮೆಂಟ್ ಮೋಷನ್‌ಗಳಿವೆ. ಮಾನ್ಯ ಕೃಷ್ಣನ್‌ರವರು, ಮಾನ್ಯ ವೆಂಕಟರಾಮಯ್ಯನವರು ಹಾಗೂ ಶ್ರೀಮತಿ ನಾಗರತ್ನಮ್ಮ ನವರು ಮಾತನಾಡಲಿ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಪ್ರಿವಿಲೇಜ್ ಮೋಷನ್‌ಗೆ ಕಳಿಸಿದ್ದೇನೆ.

ಅಧ್ಯಕ್ಷರು.—ಮೊದಲು ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ತೆಗೆದುಕೊಳ್ಳೋಣ ಪ್ರಿವಿಲೇಜ್ ಮೋಷನ್ ಅನ್ನು ನಾನು ನೋಡುತ್ತೇನೆ.

(ಗೊಂದಲ)

ಶ್ರೀ ಹೊಹಮದ್ ಲೈಕುದ್ದೀನ್.—ಮಾನ್ಯ ಅಧ್ಯಕ್ಷರೇ,.....

ಒಬ್ಬ ಮಾನ್ಯ ಸದಸ್ಯರು.—ಅವರು ಬೀದರ್ ಜಿಲ್ಲೆ ಶಾಸಕರು, ಅವರಿಗೆ ಮೊದಲು ಅವಕಾಶ ಕೊಡಬೇಕು.

ಅಧ್ಯಕ್ಷರು.—ತಾವು ಅವರಬಗ್ಗೆ ಪಕಾಲತ್ತು ಮಾಡುವುದು ಬೇಡ. ಮುಂದೆ ಇದು ಸ್ಪೆಷಲ್ ಕೇಸ್ ಎಂದು ಪರಿಗಣಿಸಿ ಆವರಿಗೂ ಅವಕಾಶ ಕೊಡೋಣ.

ನಿಲುವಳಿ ಸೂಚನೆ ಪ್ರಸ್ತಾಪ

ಬೀದರ್‌ನಲ್ಲಿ ನಡೆದ ಮತೀಯ ಗಲಭೆಯ ಬಗ್ಗೆ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷ ನಾಯಕಿಯವರು).—ಮಾನ್ಯ ಅಧ್ಯಕ್ಷರೇ, ಬೀದರ್ ಬಹಳ ಬ್ಯಾಕ್‌ವರ್ಡ್ ಏರಿಯಾ ಆದರೂ it is a peace loving district. ಅಲ್ಲಿಯ ಜನ ಬಹಳ ಮೃದು. ಅವರುಗಳಿಗೆ ಯಾವ ತರಹದ ಗಲಾಟೆ ಆಗಬಾರದು, ನಾವು ತಾತ್ಕಾಲಿಕವಾಗಿ ಬಾಳಬೇಕು ಎಂದು ಹೇಳುವಂಥ ತಾಂತಿ ಪ್ರಿಯ ಜನಗಳು ಅವರು. ಅಲ್ಲಿ ೧೪, ೧೫ ಮತ್ತು ೧೬ ರಂದು ಆದಂಥ ಅವಾಂತರ ಮತ್ತು ಅಲ್ಲಿ ಆದಂಥ ಅಮಾನುಷವಾದ ಘಟನೆಗಳನ್ನು ನೋಡಿದರೆ ಮಾನವೀಯತೆ ಇಲ್ಲದೇ ಇಂಥ ಘಟನೆಗಳು ನಡೆದಿರುವುದು ಬಹಳ ದುರದುಷ್ಕರ. ಈ ಘಟನೆಯಲ್ಲಿ ಆರು ಜನ ವಿದ್ಯಾರ್ಥಿಗಳು ಸತ್ತು ಹೋಗಿದ್ದಾರೆ. ಇದರ ಬಗ್ಗೆ ೪೦ ಜನರನ್ನು ಅರೆಸ್ಟ್ ಕೂಡಾ ಮಾಡಿದ್ದಾರೆ. ಮತ್ತು ಇದರ ವಿಚಾರವಾಗಿ ಸಿ. ಒ. ಡಿ. ತನಿಖೆಯನ್ನು ಮಾಡುತ್ತೇವೆ ಎಂದು ಹೇಳಿ ಈಗ ಜುಡಿಸಿಯಲ್ ಎನ್‌ಕ್ವೈರಿಗೂ ಕೂಡಾ ಹಾಕಿದ್ದಾರೆ ಎಂದು ಈಗ ನಮಗೆಲ್ಲಾ ಗೊತ್ತಾಗಿದೆ. ಇದು ನಡೆದಾದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಗವರ್ನರ್ ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ನಮ್ಮ ಪಕ್ಷದಿಂದ ಜಾಫರ್ ಷರೀಫ್ ಅವರು ಮತ್ತು ಅರೋರಾ ಎಂ. ಪಿ. ಅವರೂ ಕೂಡಾ ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ಅಲ್ಲಿಗೆ ಭೇಟಿ ಕೊಟ್ಟು ಅಲ್ಲಿ ನಡೆದಂಥ ಎಲ್ಲಾ ದುರದೃಷ್ಟ ಕೃತ್ಯಗಳನ್ನು ಮತ್ತು ಅಲ್ಲಿ ನಡೆದಿರತಕ್ಕಂಥದ್ದೆಲ್ಲವನ್ನು ನೋಡಿ ಮನಸ್ಸಿಗೆ ಬಹಳ ಬೇಸರು ಪಟ್ಟುಕೊಂಡು ಎಲ್ಲರೂ ಬಂದಿದ್ದಾರೆ. ಇದಾದನಂತರ ಹೈಪವರ್ ಕಮಿಟಿಯನ್ನು ಮಾಡಿ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.